ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಉತ್ತರಪ್ರದೇಶದ ಕಾಶಿ ವಿಶ್ವನಾಥ ದೇವಾಲಯದಲ್ಲಿ ಅಭಿಷೇಕ ಮಾಡಿ, ಪ್ರಾರ್ಥನೆಯನ್ನು ಸಲ್ಲಿಸಿದರು.

ಸಂಪುಟ : 45 | ಸಂಚಿಕೆ : 9 | ಅಧಿಕ ಶ್ರಾವಣ–ನಿಜಶ್ರಾವಣ | ಕಲಿಯುಗಾಬ್ದ 5125 | 15–08–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಅಖಂಡ ಭಾರತ – ಐತಿಹಾಸಿಕ ಸತ್ಯ – ಕಾಲದ ಅನಿವಾರ್ಯತೆ

**ಭೂಗರ್ಭಶಾಸ್ತ್ರದ ದೃಷ್ಟಿಯಲ್ಲಿ**

ಭೂಗರ್ಭಶಾಸ್ತ್ರಗಳ ಆಧಾರದಲ್ಲಿ ಹೇಳುವುದಾದರೆ, ಹಿಂದೂಕುಶ್ ಪರ್ವತ ಶ್ರೇಣಿಗಳಿಂದ ಮೊದಲ್ಗೊಂಡು ಅರುಣಾಚಲ ಪ್ರದೇಶದವರೆಗೆ, ಕಾರಾಕೋರಂ ಪರ್ವತ ಶ್ರೇಣಿಗಳಿಂದ ಶುರುವಾಗಿ ಶ್ರೀಲಂಕೆಯವರೆಗಿನ ಭೂಭಾಗವು ಯಾವುದೇ ಹೋಳು ಹಿಡಿಗಳಿಲ್ಲದ ಇಡಿಯಾದ ಪ್ರದೇಶವಾಗಿದೆ. ಇದನ್ನೇ ಶಾಸ್ತ್ರಜ್ಞರು ಇಂಡಿಯನ್ ಪ್ಲೇಟ್ಸ್ ಎಂದು ಗುರುತಿಸುತ್ತಾರೆ.


ಈ ಭೂಭಾಗವು ಸುಮಾರು 18 ಕೋಟಿ (180 ಮಿಲಿಯನ್) ವರ್ಷಗಳ ಮೊದಲು ಆಫ್ರಿಕಾ ಖಂಡದಿಂದ ತುಸುತುಸುವಾಗಿ ಬೇರ್ಪಟ್ಟು ಉತ್ತರಕ್ಕೆ ಸರಿಯುತ್ತ 5ಕೋಟಿ ವರ್ಷಗಳ ಮುಂಚೆ ಏಷಿಯಾ ಖಂಡಕ್ಕೆ ಬಂದು ಬಡಿದಪ್ಪಿತು. ಈ ಘರ್ಷಣೆಯ ಪರಿಣಾಮ ಹೆಚ್ಚಿದ್ದಲ್ಲೆಲ್ಲ ಆ ಭೂಭಾಗವು ಪರ್ವತ ಶ್ರೇಣಿಗಳಾಗಿ ರೂಪುಗೊಂಡಿತು. ಇದುವೇ ಹಿಮಾಲಯ, ಕಾರಾಕೋರಂ, ಹಿಂದೂಕುಶ್ ಪರ್ವತ ಶ್ರೇಣಿಗಳ ಉಗಮಕ್ಕೆ ಮೂಲವಾಯಿತು.

ಭೂಭಾಗಗಳ ಘರ್ಷಣೆಯ ಮುಂದುವರಿಕೆಯ ಪರಿಣಾಮವಾಗಿ ಹಿಮಾಲಯದ ಎತ್ತರ ಹೆಚ್ಚುತ್ತಾ ಸಾಗಿದಂತೆ ಭಾರತದ ಉತ್ತರಕ್ಕೆ ಯಥೇಚ್ಛ ಮಳೆಯ ವರದಾನವೂ ಸಿಕ್ಕಿತು. ಮುಂದೆ ಹಿಮಾಲಯದ ಮಡಿಲಿಂದ ಸಿಂಧು, ಸರಸ್ವತಿ, ಗಂಗೆ, ಬ್ರಹ್ಮಪುತ್ರ, ಯಮುನೆ, ಸರಯೂಗಳು ಹುಟ್ಟಿ ಧುಮ್ಮಿಕ್ಕಿ ಹರಿಯುತ್ತ ತಾವು ಹೋದಲ್ಲೆಲ್ಲ ಭೂಮಿಯನ್ನು ಸುಜಲಾಂ ಸುಫಲಾಂಗೊಳಿಸಿದವು.




ಭಾರತದ ದಕ್ಷಿಣಕ್ಕೆ ಸಮುದ್ರರಾಜನ ಕಾವಲು ಮೊದಲಿನಿಂದಲೇ ಇತ್ತು. ಈಗ ಉತ್ತರಕ್ಕೆ ಹಿಮಾಲಯದ ರೂಪದಲ್ಲಿ ಉನ್ನತವಾದ ಸಂರಕ್ಷಣೆಯೂ ಸಿಕ್ಕಿತು. ಸಿಂಧ್, ಬಲೋಚ್, ಗಾಂಧಾರ, ಪಂಜಾಬ್, ಕಾರಾಕೋರಂ, ಲಡಾಖ್, ಕೈಲಾಸ್ ಮಾನ್ ಸರೋವರ, ಕಾಂಚನ್ ಜುಂಗಾ, ಅರುಣಾಚಲ, ಬ್ರಹ್ಮದೇಶ, ಬಂಗಾಳ, ಅಂಡಮಾನ್ – ನಿಕೋಬಾರ್ , ಶ್ರೀಲಂಕಾ, ಮಾಲ್ದೀವ್ಸ್‌ಗಳೆಲ್ಲವೂ ಆಧುನಿಕ ಭೂವಿಜ್ಞಾನ ನಿರೂಪಿಸುವ ಭಾರತದ ಪ್ರಾಕೃತಿಕ, ನೈಸರ್ಗಿಕ ಸೀಮೆ. ಅದಕ್ಕೆಂದೇ ಅದು ಭಾರತದ ಸಾಂಸ್ಕೃತಿಕ ಗಡಿಯೂ ಹೌದು. ಇದುವೇ ಅಖಂಡ ಭಾರತದ ಸಂಕಲ್ಪನೆ.

ಇಂದು ನಾವು ಕಾಣುವ ನಮ್ಮ ದೇಶದ ಭೂಪಟವು ವಿದೇಶಿ ಆಕ್ರಮಣಕಾರರ ವಿರುದ್ಧ ಭಾರತದ ಹೋರಾಟದ ಬಹುದೊಡ್ಡ ಸರಣಿಯಲ್ಲಿನ ಇತ್ತೀಚಿನ ಬೆಳವಣಿಗೆಯ ಪರಿಣಾಮ. ಅಂದರೆ 15ನೇ ಆಗಸ್ಟ್ 1947ರಂದು ಬ್ರಿಟೀಷರ ದಾಸ್ಯದ ವಿರುದ್ಧದ ಹೋರಾಟದ ಕಾರಣವಾಗಿ ಸ್ವಾತಂತ್ರ್ಯವನ್ನು ಗಳಿಸಿದ ಆದರೆ ಈ ಪ್ರಯತ್ನದಲ್ಲಿ ವಿಭಜಿತಗೊಂಡ ಭಾರತೀಯರ ಪಾಲಿಗೆ ಬಂದ ಭೂಭಾಗದ ನಕಾಶೆಯಾಗಿದೆ.




**ಸ್ಟ್ರಾಬೊ ಎಂಬ ಪ್ರಾಚೀನ ಗ್ರೀಕ್ ಭೂಗೋಳ ಶಾಸ್ತ್ರಜ್ಞ ಕ್ರಿ.ಪೂ 1ನೇ ಶತಮಾನದಲ್ಲಿ ಸಿದ್ಧಪಡಿಸಿದ ಜಗತ್ತಿನ ನಕಾಶೆ. ಇದರಲ್ಲಿ ಹಿಮಾಲಯದಿಂದ ಸಮುದ್ರದ ವರೆಗಿನ ಸಂಪೂರ್ಣ ಪ್ರದೇಶವನ್ನು ಇಂಡಿಯಾ ಎಂದೇ ಗುರುತಿಸಲಾಗಿದೆ.**

ಆದರೆ, ತೀರಾ ಪ್ರಾಚೀನ ಸಮಯದಿಂದಲೂ ಬ್ರಿಟೀಷರು ಭಾರತವನ್ನು ಸಂಪೂರ್ಣವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳುವವರೆಗಿನ ಕಾಲಘಟ್ಟದವರೆಗೂ ಹಿಂದೂಸ್ಥಾನದ ನಕಾಶೆಯಲ್ಲಿ ದಕ್ಷಿಣಕ್ಕೆ ಶ್ರೀಲಂಕೆಯೂ ಪೂರ್ವಕ್ಕೆ ಬ್ರಹ್ಮದೇಶ, ಭೂತಾನ್, ಟಿಬೇಟ್ ಇವುಗಳೊಂದಿಗೆ ಇಂದಿನ ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ನೇಪಾಳಗಳನ್ನೂ ಸಹ ಭಾರತದ ಭೂಮಿಯೆಂದೇ ತೋರಿಸಿದ್ದಿದೆ.

**ಪ್ರಾಚೀನ ಸಾಹಿತ್ಯದಲ್ಲಿ ಅಖಂಡ ಭಾರತದ ಸಂಕಲ್ಪನೆ:**

ಮನುಕುಲದ ಮೊಟ್ಟಮೊದಲ ವಾಙ್ಮಯ ವೇದಗಳಲ್ಲಿ ಋಷಿಗಳು ಹೀಗೆ ಹೇಳುತ್ತಾರೆ:

**ಯಸ್ಯೇಮೆ ಹಿಮವಂತೋ ಮಹಿತ್ವಾ ಯಸ್ಯ ಸಮುದ್ರಂ ರಸಯಾ ಸಹಾಹು:।**
**ಯಸ್ಯೇಮಾಃ ಪ್ರದಿಶೋ ಯಸ್ಯ ಬಾಹೂ ಕಸ್ಮೈ ದೇವಾಯ್ ಹವಿಷಾ ವಿಧೇಮ್॥**

(ಋಗ್ವೇದ 10.121.4)

ಇಲ್ಲಿ ಪೂರ್ವಾಭಿಮುಖವಾಗಿ ನಿಂತ ಪ್ರಜಾಪತಿಯನ್ನು ಕುರಿತು ವೇದಋಷಿಯು: "ಹೇ ಮಹಾಬಾಹು, ನಿನ್ನ ಎಡಕ್ಕೆ ಹಿಮಾಚ್ಛಾದಿತ ಹಿಮಾಲಯವೂ ಬಲಕ್ಕೆ ಅಸೀಮ ಸಮುದ್ರವೂ ಇದೆ. ಇವು ನಿನ್ನೆರಡೂ ಬಾಹುಗಳಂತಿವೆ. ಇಂತಹ ಮಹಿಮಾವಂತನಾದ ನಿನ್ನನ್ನಲ್ಲದೇ ನಾವು ಇನ್ಯಾರಿಗೆ ಅರ್ಘ್ಯ ಅರ್ಪಣೆ ಮಾಡುವುದು?" ಹೀಗೆ ಹೇಳುವಲ್ಲಿ ಅವರು ಅಖಂಡ ಭಾರತದ ಭೌಗೋಳಿಕ ವ್ಯಾಪ್ತಿ ವಿಸ್ತಾರವನ್ನೇ ಸಾರುತ್ತಿದ್ದಾರೆ.

ಇನ್ನು ರಾಮಾಯಣದ ಹೆಚ್ಚಿನ ಪ್ರಸಂಗಗಳಲ್ಲಿ ಭಾರತದ ಉತ್ತರ ಮತ್ತು ದಕ್ಷಿಣಭಾಗಗಳ ಉಲ್ಲೇಖ ಕಂಡುಬಂದರೆ, ಅದೇ ಮಹಾಭಾರತದಲ್ಲಿ ಹೆಚ್ಚಾಗಿ ಪೂರ್ವ ಮತ್ತು ಪಶ್ಚಿಮ ಭಾರತದ ಸ್ಥಳ ವಿವರಗಳು ನಮೂದಾಗಿವೆ. ರಾಮನಿಂದ ರಾಜನಾಗಿ ಅಭಿಷಿಕ್ತನಾದ ವಿಭೀಷಣನ ಶ್ರೀಲಂಕೆಯ 50ಕ್ಕೂ ಹೆಚ್ಚಿನ ಸ್ಥಳಗಳ ವಿವರಗಳು ರಾಮಾಯಣದಲ್ಲಿ ಬರುತ್ತದೆ. ಹಾಗೆಯೇ ಸೀತೆಯ ಜನ್ಮಸ್ಥಾನ ಜನಕಪುರಿ ಇಂದಿಗೆ ನೇಪಾಳದಲ್ಲಿದೆ. ಇನ್ನು ಟಿಬೇಟಿನ ಮಾನಸ ಸರೋವರ, ಉಜಬೇಕಿಸ್ತಾನದ ಬಾಹ್ಲೀಕ ಪ್ರಾಂತ, ಅಫ್ಘಾನಿಸ್ತಾನದ ಗಾಂಧಾರ, ಪಾಕಿಸ್ತಾನದ ಸಿಂಧ್ ಪ್ರದೇಶ, ಬಾಂಗ್ಲಾದೇಶದ ಅಂಗದೇಶ ಇವೆಲ್ಲವೂ ಮಹಾಭಾರತದ ಸಮಯದ ಭಾರತದ ಹರಿವನ್ನು ವಿವರಿಸುತ್ತವೆ.

ಪುರಾಣಗಳ ವಿಷಯಕ್ಕೆ ಬಂದರೆ ದೇವಿ ಭಾಗವತ, ಸ್ಕಂದ ಪುರಾಣ, ಶಿವಪುರಾಣಗಳಲ್ಲಿ ದೇವಿಯ 51 ಶಕ್ತಿಪೀಠಗಳ ವರ್ಣನೆ ಇದೆ. ಈ ಶಕ್ತಿಪೀಠಗಳು ಕಾಶ್ಮೀರದ ಶಾರದಾ ಪೀಠದಿಂದ ಹಿಡಿದು ಕನ್ಯಾಕುಮಾರಿಯವರೆಗೂ; ಗುಜರಾತಿನ ಸೋಮನಾಥದಿಂದ ಆಸಾಮಿನ ಕಾಮಾಖ್ಯದವರೆಗೆ ಹರಡಿಕೊಂಡಿವೆ. ಅಷ್ಟೇ ಅಲ್ಲದೆ ಕೆಲ ಶಕ್ತಿಪೀಠಗಳು ನೇಪಾಳದಲ್ಲಿ (2), ಪಾಕಿಸ್ತಾನದ ಸಿಂಧ್ (1) ಹಾಗೂ ಬಲೋಚ್ (1)ನಲ್ಲಿ, ಟಿಬೇಟ್ (1), ಶ್ರೀಲಂಕಾ (2), ಬಾಂಗ್ಲಾದೇಶ (6) ಗಳಲ್ಲಿಯೂ ಇವೆ. ಇದು ಪುರಾಣಗಳಲ್ಲಿ ಅಡಕವಾಗಿರುವ ಭಾರತದ ಅಖಂಡತೆಯ ಉದಾಹರಣೆ.

**ಸಾಂಸ್ಕೃತಿಕ ಅಖಂಡತೆ**

ಸಂಸ್ಕೃತಿಯ ವಿಶಾಲ ವಿಸ್ತೃತ ಹರಿವಿನಲ್ಲಿ ಹತ್ತಾರು ವಿಷಯಗಳು ಅಡಕಗೊಂಡಿವೆ. ಅಲ್ಲಿ ಭಾಷೆ, ಭೂಷಣ, ಆಹಾರ, ವಿಹಾರ, ಅಲಂಕಾರ, ಶಿಲ್ಪಕಲೆ, ಸಂಖ್ಯಾಗಣನೆ, ಗಾಯನ, ನೃತ್ಯ, ಸಂಗೀತ ಹೀಗೆ ಸಂಸ್ಕೃತಿ ಎಂಬ ಬೃಹತ್ ಮರಕ್ಕೆ ಅನೇಕಾನೇಕ ಶಾಖೆಗಳು.

ಸಂಸ್ಕೃತಿಯ ಈ ಶಾಖೆಗಳು ಸಮೃದ್ಧಿಯಾದಂತೆ ಅದರಿಂದ ಉಪಕೃತಗೊಂಡ ಜನಸಮುದಾಯದ ಜೀವನರೀತಿ ಮತ್ತು ಶೈಲಿಗಳೂ ಸಮೃದ್ಧಿಯೆಡೆಗೆ ಸಾಗುತ್ತವೆ. ಹೀಗೆ ಜನಸಮುದಾಯಕ್ಕೆ ಜೀವನದ ಕಲೆಯನ್ನು ತಿಳಿಯಪಡಿಸಿ ನಾಗರಿಕತೆಯನ್ನು ಶ್ರೀಮಂತವಾಗಿಸುವ ವಿಧಾನವೇ ಸಂಸ್ಕೃತಿ ಎನಿಸುತ್ತದೆ.

ಇನ್ನು ಭಾರತವೆಂದರೆ ಹಿಂದುಸ್ಥಾನ; ಇಲ್ಲಿನ ಜನರ ಸಂಸ್ಕೃತಿಯು ಹಿಂದೂ ಸಂಸ್ಕೃತಿ. ಇಂತಹ ಹಿಂದೂ ಸಂಸ್ಕೃತಿಯು ಹಬ್ಬಿ ಹರಡಿದ ದೇಶಗಳೆಲ್ಲ ಸಾಂಸ್ಕೃತಿಕ ಭಾರತದ ಶಾಖೋಪಶಾಖೆಗಳೆಂದೇ ಪರಿಗಣಿತವಾದವು. ಇದು ಜಗತ್ತಿನ ಯಾವುದೇ ರಾಜಕೀಯ ಶಕ್ತಿಯ ಪ್ರಭಾವಕ್ಕಿಂತ ಅದೆಷ್ಟೋ ಗಾಢ ಪ್ರಭಾವವನ್ನು ಉಂಟುಮಾಡಿದೆ. ಪ್ರಾಚೀನ ಭಾರತದ ನಾವಿಕರು ಮತ್ತು ವ್ಯಾಪಾರಿಗಳು ವ್ಯಾಪಾರ–ವ್ಯವಹಾರಗಳ ಜೊತೆಜೊತೆಗೆ ವೈದಿಕ – ಅವೈದಿಕ ಪಂಥಗಳನ್ನೂ ಆಚರಣೆಗಳನ್ನು ಗಾಯನ ನೃತ್ಯ ಕಲೆಗಳನ್ನೂ ಕೊಂಡೊಯ್ದರು. ಸಿಂಧೂ ಸಾಗರವನ್ನು ದಾಟಿ ರೋಮ್ ಹಾಗೂ ಅರೇಬಿಯಾದೊಡನೆಯೂ ಸಂಬಂಧಗಳನ್ನು ಇಟ್ಟುಕೊಂಡಿದ್ದರು.

ಅದಕ್ಕೆಂದೇ ಸುದೂರದ ಆಗ್ನೇಯ ಏಷ್ಯಾದ ದೇಶಗಳಲ್ಲಿ ವಿಷ್ಣು, ಗಣಪತಿ, ಶಿವ, ರಾಮ, ಕೃಷ್ಣರ ದೇವಳಗಳು ಮತ್ತು ಬೌದ್ಧಭಿಕ್ಕುಗಳ ಪ್ರಭಾವಕ್ಕೊಳಗಾಗಿ ಮೂಡಿಬಂದ ಚೈತ್ಯಾಲಯಗಳನ್ನೂ ಕಾಣಬಹುದಾಗಿದೆ. ಥಾಯ್ಲ್ಯಾಂಡ್ ನಲ್ಲಿ ಅಯೋಧ್ಯೆಯನ್ನು ಹೋಲುವ 'ಅಯುಥ್ಯಾ' ಎಂಬ ನಗರವಿದೆ. ಅಲ್ಲಿನ ರಾಜರು ತಮ್ಮ ಬಿರುದಿನಲ್ಲಿ 'ರಾಮ' ಎಂಬುದನ್ನು ಅಭಿಮಾನದಿಂದ ಸೇರಿಸುತ್ತಾರೆ. ಬಾಲಿ ದ್ವೀಪದ ಕೇಚಕ ನೃತ್ಯ, ಥಾಯ್ಲ್ಯಾಂಡ್‌ನ ಲಾಖೋನ್ ಖೋಲ್, ಕಾಂಬೋಡಿಯಾದ ರಾಯಲ್ ಬ್ಯಾಲೆ, ಇಂಡೋನೇಷಿಯಾದ ರಾಮಾಯಣ ಬ್ಯಾಲೆ, ಇವೆಲ್ಲವುಗಳ ಆಧಾರ ಹಿಂದೂ ಸಂಸ್ಕೃತಿಯೇ ಆಗಿದೆ.

ಭಾರತದ ಈ ವಿರಾಟ್ ಸಾಂಸ್ಕೃತಿಕ, ಸಾಹಿತ್ಯಿಕ, ಭೌಗೋಳಿಕ, ಆಧ್ಯಾತ್ಮಿಕ ಏಕಸೂತ್ರತೆಯನ್ನು ವೇದಕಾಲದ ಋಷಿಮುನಿಗಳಿಂದ ಮೊದಲ್ಗೊಂಡು ಸ್ವಾಮೀ ವಿವೇಕಾನಂದ, ದಯಾನಂದ ಸರಸ್ವತಿ, ಮಹರ್ಷಿ ಅರವಿಂದರವರೆಗಿನ ಆಧುನಿಕ ಮನೀಷಿಗಳು ಪುನರುಚ್ಚರಿಸಿದ್ದಾರೆ.


ಈ ನೈಸರ್ಗಿಕ ಅಖಂಡತೆಯನ್ನು ಬ್ರಿಟೀಷರು ಈ ನೆಲದ ಮೇಲೆಳೆದ ಕೃತ್ರಿಮ ಅವೈಜ್ಞಾನಿಕ ಗೆರೆಗಳ ಇಂದಿನ ಸೀಮಿತ ಗಡಿಯಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಅದಕ್ಕೆಂದೇ ಮಹರ್ಷಿ ಅರವಿಂದರು: "I can clearly visualize that Bharat Mata is enthroned again at the seat of Vishwaguru after its reunification" ಎಂದು ಉದ್ಗರಿಸಿದ್ದು.

**ಭಾರತದ ಅಖಂಡತೆಯ ಅನಿವಾರ್ಯತೆ ಮತ್ತು ಸಾಧ್ಯತೆ:**

ಕೆಲ ಸಂಶಯಮತಿಗಳಿಗೆ ಭಾರತದ ವಿಭಜನೆಯ ಚಿತ್ರ ಅಗತ್ಯಕ್ಕಿಂತ ದೊಡ್ಡದಾಗಿ ಕಾಣಿಸುತ್ತದೆ. ಭಾರತದ ವಿಭಜನೆಯೆಂಬುದು ಕಣ್ಣಿಗೆ ಕಾಣುವ ಸತ್ಯವೇ ಹೌದು ಆದರೂ ಅದು ತಾತ್ಕಾಲಿಕ, ಕೃತ್ರಿಮ. ವಿಭಜನೆಯ ಆರು ತಿಂಗಳ ಮುಂಚೆ ಒಮ್ಮೆ ಪಂಡಿತ್ ನೆಹರುರವರಲ್ಲಿ ಪಾಕಿಸ್ತಾನದ ವಿಚಾರವಾಗಿ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು 'ಅದೊಂದು ಮೂರ್ಖರ ಕನಸು' ಎಂದೇ ಉತ್ತರಿಸಿದ್ದರು. ಲಾರ್ಡ್ ವೇವೆಲ್ ಬ್ರಿಟೀಷ್ ಸಂಸತ್ತಿನಲ್ಲಿ ವಿಭಜನೆಯ ವಿಚಾರವಾಗಿ ಮಾತನಾಡುತ್ತ, 'ಭಾರತವನ್ನು ದೇವರೇ ಒಂದಾಗಿಸಿರುವಾಗ ಅದರ ವಿಭಜನೆ ಮಾಡಲು ನಾವ್ಯಾರು?' ಎಂದು ಹೇಳಿದ್ದರು. ಆದರೆ ಈ ಎಲ್ಲ ನಿರೀಕ್ಷೆಗಳ ಹೊರತಾಗಿಯೂ ಭಾರತ ತುಂಡಾಯಿತು. ಹೀಗೆ ಒಮ್ಮೆ ಅಶಕ್ಯ ಎಂದೆನಿಸಿದ್ದ ಭಾರತದ ವಿಭಜನೆಯು ಸಾಧ್ಯವಾಯಿತಾದರೆ

2ನೇ ಪುಟಕ್ಕೆ...

## ಸಂಸ್ಮರಣೆ ಧ್ಯಾನ್‌ಚಂದ್ (29ನೇ ಆಗಸ್ಟ್, 1905 – 3ನೇ ಡಿಸೆಂಬರ್ 1979)



ಜಗತ್ತಿನ ಹಾಕಿಮಾಂತ್ರಿಕನೆಂದೇ ಗುರುತಿಸಿಕೊಳ್ಳುವ ಮೇಜರ್ ಧ್ಯಾನ್‌ಚಂದ್ 1928ರ ಆಮ್‌ಸ್ಟರ್‌ಡ್ಯಾಮ್, 1932ರ ಲಾಸ್ ಏಂಜಲೀಸ್ ಮತ್ತು 1936ರ ಬರ್ಲಿನ್ ಒಲಂಪಿಕ್‌ಗಳಲ್ಲಿ ಭಾರತ ಚಿನ್ನದ ಪದಕಗಳನ್ನು ಪಡೆಯುವಲ್ಲಿ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಆಗಸ್ಟ್ 29, 1905ರಲ್ಲಿ ಪ್ರಯಾಗ್‌ರಾಜ್‌ನಲ್ಲಿ ಜನಿಸಿದ ಧ್ಯಾನ್‌ಸಿಂಗ್ ತನ್ನ ತಂದೆಯಂತೆ ಸೈನಿಕರಾಗಿ 1922ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಗೊಳ್ಳುತ್ತಾರೆ. ಸೇನೆಯಲ್ಲಿದ್ದರಿಂದ ಹಾಕಿ ಅಭ್ಯಾಸಕ್ಕೆ ಹಗಲು ಸಾಧ್ಯವಾಗದ ಕಾರಣ ರಾತ್ರಿಯ ವೇಳೆ ಚಂದಿರನ ಬೆಳದಿಂಗಳಲ್ಲಿ ಅಭ್ಯಾಸ ಮಾಡುತ್ತಿದ್ದರು. ಆದ್ದರಿಂದ ಇತರೆ ಸೈನಿಕರು ಅವರಿಗೆ ಚಂದ್ (ಚಂದಿರ) ಎಂದು ಕರೆಯುತ್ತಿದ್ದರು. ಅಲ್ಲಿಂದ ಅವರ ಹೆಸರು ಧ್ಯಾನ್‌ಚಂದ್ ಎಂದಾಯಿತು.

**ಒಲಿಂಪಿಕ್ಸ್‌ನಲ್ಲಿ ಭಾಗವಹಿಸದ ಇಂಗ್ಲೆಂಡ್:** 1926ರಲ್ಲಿ ನ್ಯೂಜಿಲ್ಯಾಂಡ್ ಪ್ರವಾಸದ ಮೂಲಕ ವಿದೇಶದಲ್ಲಿ ಪ್ರಥಮ ಪಂದ್ಯವನ್ನು ಧ್ಯಾನ್‌ಚಂದ್ ಆಡಿದರು. ನ್ಯೂಜಿಲ್ಯಾಂಡಿನ ಪ್ರವಾಸದ ನಂತರ ಭಾರತ ತಂಡದ ಮತ್ತು ಧ್ಯಾನ್‌ಚಂದ್ ಅವರ ಪ್ರಸಿದ್ಧಿ ಹೆಚ್ಚಿತ್ತು. 1928ರಲ್ಲಿ ಒಲಿಂಪಿಕ್ಸ್ ಅಭ್ಯಾಸ ಪಂದ್ಯದಲ್ಲಿ ಭಾರತದ ಜೊತೆಗೆ ಇಂಗ್ಲೆಂಡ್ ಹೀನಾಯವಾಗಿ ಸೋತು, ತನ್ನ ಅಧೀನದಲ್ಲಿರುವ ರಾಷ್ಟ್ರದ ವಿರುದ್ಧ ಜಗತ್ತಿನ ವೇದಿಕೆಯಲ್ಲಿ ಸೋಲಲಿಚ್ಛಿಸದೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿತು. 1947ರವರೆಗೆ ತನ್ನ ತಂಡವನ್ನು ಒಲಿಂಪಿಕ್ಸ್‌ಗೆ ಕಳುಹಿಸಲೇ ಇಲ್ಲ!

**ನ್ಯೂಜಿಲ್ಯಾಂಡ್ ಪ್ರವಾಸದ 5 ದಶಕದ ನಂತರ:** 1926ರ ಭಾರತದ ನ್ಯೂಜಿಲ್ಯಾಂಡ್ ಪ್ರವಾಸದ 5 ದಶಕಗಳ ನಂತರ ಧ್ಯಾನ್‌ಚಂದ್ ಅವರ ಮಗ ಅಶೋಕ್ ಕುಮಾರ್ ನ್ಯೂಜಿಲ್ಯಾಂಡಿಗೆ ಹೋದಾಗ ಅನೇಕ ಹಾಕಿ ಕ್ಲಬ್‌ಗಳಿಗೆ ಭೇಟಿ ನೀಡಿದರು. ಅನೇಕ ಕ್ಲಬ್‌ಗಳಲ್ಲಿ 1926ರಲ್ಲಿ ನ್ಯೂಜಿಲ್ಯಾಂಡ್ ಪ್ರವಾಸಕ್ಕೆ ಬಂದಿದ್ದ ಭಾರತ ಹಾಕಿ ತಂಡದ ಚಿತ್ರವಿತ್ತು! ಅಲ್ಲಿಗೆ ಅಶೋಕ್ ಕುಮಾರ್ ಅವರನ್ನು ಭೇಟಿ ಮಾಡಲು ಬಂದ ವ್ಯಕ್ತಿ ಅವರಿಗೆ ಕೆಲವು ಮರದ ತುಂಡುಗಳನ್ನು ತೋರಿಸಿ ಅದರ ಕುರಿತು ತಿಳಿಸಿದರು. ಆ ಮರದ ತುಂಡುಗಳು 1926ರ ನ್ಯೂಜಿಲ್ಯಾಂಡ್ ವಿರುದ್ಧದ ಪಂದ್ಯದಲ್ಲಿ ಧ್ಯಾನ್‌ಚಂದ್ ಅವರ ತುಂಡಾದ ಹಾಕಿ ಸ್ಟಿಕ್‌ನದ್ದಾಗಿತ್ತು!

**1936 ಒಲಿಂಪಿಕ್:** ಬರ್ಲಿನ್ ಒಲಿಂಪಿಕ್ಸ್ ವೇಳೆಗೆ ದಂತಕಥೆಯಾಗಿದ್ದ ಧ್ಯಾನ್‌ಚಂದ್ ಅವರ ಆಟದ ವೈಖರಿಯ ಕುರಿತು ಪತ್ರಿಕೆಯೊಂದು 'ಒಲಿಂಪಿಕ್ ಕ್ರೀಡಾಕೂಟದಲ್ಲಿ ಇಂದ್ರಜಾಲದ ಪ್ರದರ್ಶನವೂ ನಡೆಯುತ್ತಿದೆ' ಎಂದು ವರ್ಣಿಸಿತ್ತು. ಬರ್ಲಿನ್ ಒಲಿಂಪಿಕ್ಸ್‌ನ ಅಭ್ಯಾಸ ಪಂದ್ಯದಲ್ಲಿ ಭಾರತ ಜರ್ಮನಿಯ ವಿರುದ್ಧ 4–1 ರಿಂದ ಸೋತಿತ್ತು! ಈ ಧೈರ್ಯದ ಮೇಲೆ ಮತ್ತೆ ಫೈನಲ್‌ನಲ್ಲಿ ಒಂದಾದ ಭಾರತ ಜರ್ಮನಿ ಪಂದ್ಯವನ್ನು ವೀಕ್ಷಿಸಲು ಹಿಟ್ಲರ್ ಸ್ವತಃ ಬಂದಿದ್ದನು. ಆದರೆ ಪಂದ್ಯ ಮುಗಿಯುವ ಮುನ್ನ ಕ್ರೀಡಾಂಗಣದಿಂದ ತೆರಳಬೇಕಾಯಿತು! ಏಕೆಂದರೆ ಧ್ಯಾನ್‌ಚಂದ್ ಅವರ 6 ಗೋಲುಗಳ ಸಹಕಾರದಿಂದ ಭಾರತ 8–1 ಗೋಲುಗಳಿಂದ ಜರ್ಮನಿಯನ್ನು ಸೋಲಿಸಿತ್ತು. ಪಂದ್ಯದ ಮಾರನೇ ದಿನ ಧ್ಯಾನ್‌ಚಂದ್ ಅವರನ್ನು ಆಹ್ವಾನಿಸಿದ ಹಿಟ್ಲರ್ ಭಾರತದಲ್ಲಿ ಲ್ಯಾನ್ಸ್ ನಾಯಕನಾಗಿದ್ದ ಅವರಿಗೆ ಜರ್ಮನಿಯ ಪೌರತ್ವವನಿತ್ತು, ಇಲ್ಲಿಯ ಸೇನೆಯಲ್ಲಿ ಫೀಲ್ಡ್ ಮಾರ್ಷಲ್ ಪದವಿ ನೀಡಿ, ಆರ್ಥಿಕ ಸಹಕಾರವೂ ನೀಡುವ ಆಮಿಷ ಒಡ್ಡಿದನು. ಹಿಟ್ಲರ್ ಜಗತ್ತನ್ನು ಭಯಭೀತನಾಗಿಸಿದ್ದ ಸರ್ವಾಧಿಕಾರಿಯಾಗಿರಬಹುದು ಆದರೆ ಧ್ಯಾನ್‌ಚಂದ್ ಭಾರತೀಯ ಸೇನೆಯ ಸೈನಿಕ, "ನನಗೆ ದೇಶ ಮೊದಲು" ಎಂದು ಉತ್ತರಿಸಿ ಬಂದರು.

**ಆತ್ಮವಿಶ್ವಾಸದ ಚಿಲುಮೆ:** ನ್ಯೂಜಿಲ್ಯಾಂಡ್ ಪ್ರವಾಸದ ಪಂದ್ಯದಲ್ಲಿ ಧ್ಯಾನ್‌ಚಾಂದ್ ಎರಡು ಬಾರಿ ಗೋಲುಗಳನ್ನು ಹೊಡೆಯಲು ಪ್ರಯತ್ನಿಸಿದಾಗ ಅದನ್ನು ತಡೆದ ಗೋಲ್‌ಕೀಪರ್‌ನನ್ನು ಕುರಿತು "ನನ್ನ ಮುಂದಿನ ಗೋಲನ್ನು ನೀನು ತಡೆದರೆ ನಾನು ಹಾಕಿ ಆಡುವುದನ್ನೇ ಬಿಡುತ್ತೇನೆ" ಎಂದಿದ್ದರು. ಮೂರನೇ ಬಾರಿಗೆ ಗೋಲ್‌ಕೀಪರ್‌ನ ತಲೆಯ ಮೇಲಿಂದಲೇ ಗೋಲನ್ನು ಹೊಡೆದರು! ಈ ಘಟನೆಯನ್ನು ನ್ಯೂಜಿಲ್ಯಾಂಡ್‌ಗೆ ಹೋಗಿದ್ದ ಧ್ಯಾನ್‌ಚಂದ್ ಅವರ ಮಗ ಅಶೋಕ್ ಕುಮಾರ್ ಅವರ ಬಳಿ ಆಗ ಗಾಲಿ ಕುರ್ಚಿಯಲ್ಲಿದ್ದ ಸ್ವತಃ ಆ ಗೋಲ್‌ಕೀಪರ್ ಹಂಚಿಕೊಂಡಿದ್ದರು.

**ಹಾಕಿ ಪ್ರಿಯರ ಜೀವನಾಡಿ:** 1947ರ ಹೊತ್ತಿಗೆ ಪ್ರಥಮ ದರ್ಜೆ ಹಾಕಿ ಆಟದಿಂದ ದೂರಸರಿದಿದ್ದ ಧ್ಯಾನ್‌ಚಂದ್ ಅವರು ಆಫ್ರಿಕಾದಲ್ಲಿ ನಡೆಯುವ ಪಂದ್ಯಕ್ಕೆ ಅಲ್ಲಿರುವ ಅವರ ಅಪಾರ ಅಭಿಮಾನಿಗಳಿಗಾಗಿ ಬರಲೇಬೇಕೆಂದು ಆಫ್ರಿಕಾದಿಂದಲೇ ಭಾರತೀಯ ಹಾಕಿ ಮಂಡಳಿಗೆ ಪತ್ರ ಬಂದಿತ್ತು. ಎಲ್ಲರ ಒತ್ತಾಯದ ಮೇರೆಗೆ 43ರ ಹರೆಯದಲ್ಲೂ ಧ್ಯಾನ್‌ಚಂದ್ ತಂಡದ ನಾಯಕತ್ವ ವಹಿಸಿ ಆಫ್ರಿಕಾಗೆ ಹೋದರು. 22 ಪಂದ್ಯಗಳಿಂದ 61 ಗೋಲುಗಳನ್ನು ಹೊಡೆದರು!

**ಕ್ರೀಡಾದಿನ:** ಭಾರತದಲ್ಲಿ ಅವರ ಜನ್ಮದಿನವನ್ನು ರಾಷ್ಟ್ರೀಯ ಕ್ರೀಡಾದಿನವಾಗಿ ಆಚರಿಸಲಾಗುತ್ತದೆ. ಇತ್ತೀಚೆಗೆ ಅತ್ಯುತ್ತಮ ಕ್ರೀಡಾ ಪಟುವಿಗೆ ನೀಡಲಾಗುವ ಖೇಲ್‌ರತ್ನ ಪ್ರಶಸ್ತಿಗೆ ಅವರ ಹೆಸರಿಡಲಾಗಿದೆ. ಭಾರತದ ನಿಜವಾದ ಅನರ್ಘ್ಯ ರತ್ನವಾದ ಧ್ಯಾನ್‌ಚಂದ್ ಅವರ ನಾಲ್ಕು ಕೈ ಇರುವ ಪ್ರತಿಮೆಯನ್ನು ಅವರ ಆಟದ ವೈಖರಿಗೆ ಹಿಡಿದ ಕೈಗನ್ನಡಿಯಂತೆ ಆಸ್ಟ್ರಿಯಾದಲ್ಲಿ ನಿರ್ಮಿಸಲಾಗಿದೆ.

## ಎಲ್ಲೋ ಕೇಳಿದ ಕಥೆ

### ಕ್ರಾಂತಿಕಾರಿಗಳ ದೇಶಭಕ್ತಿ


ಗಾಂಧೀಜಿಯವರು ಆಗ ತಾನೇ ಭಾರತದ ರಾಜಕೀಯ ರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ಅವರ ಅಸಹಕಾರ ಆಂದೋಲನದ ಕಲ್ಪನೆ, ಒಂದು ವರ್ಷದಲ್ಲಿ ಸ್ವರಾಜ್ಯ ಪ್ರಾಪ್ತಿಯ ಭರವಸೆ ಇತ್ಯಾದಿ ಜನಮಾನಸದ ಮೇಲೆ ಮೋಡಿ ಮಾಡಿತು. ಆದರೆ ಈ ವಿಚಾರ ಕಾರ್ಯ ಸಾಧುವಲ್ಲ ಎಂದು ತಿಳಿಯುವವರಿಗೂ ಕಾಂಗ್ರೆಸ್‌ನಲ್ಲಿ ಕೊರತೆಯಿರಲಿಲ್ಲ. ಡಾ। ಮುಂಜೆ, ಸಿ.ಆರ್.ದಾಸ್ ಮೊದಲಾದವರು ಪೂರಾ ಭಿನ್ನಮತ ಹೊಂದಿದವರಾಗಿದ್ದರು. ಅವರು ತಮ್ಮ ಮುಂದಿನ ನಿಲುವು ಏನು, ಪರ್ಯಾಯ ಮಾರ್ಗ ಯಾವುದು ಎಂಬ ಬಗ್ಗೆಯೂ ಅನಿಶ್ಚಿತ ಸ್ಥಿತಿಯಲ್ಲಿದ್ದರು. ಈ ಕುರಿತಾಗಿ ಚರ್ಚಿಸಿ ತಮ್ಮ ಮುಂದಿನ ಹೆಜ್ಜೆ ನಿರ್ಧರಿಸುವ ಸಲುವಾಗಿ ಅವರು ನಾಗಪುರದಲ್ಲಿ ಸೇರಿದ್ದರು. ಡಾಕ್ಟರಜಿ ಸಹ ಈ ಬೈಠಕ್‌ನಲ್ಲಿದ್ದರು.

ಅಂದಿನ ಸಭೆಯಲ್ಲಿ ಒಂದು ನಿರ್ಣಯವು ಚರ್ಚೆಗಾಗಿ ಮಂಡಿತವಾಯಿತು. ಕ್ರಾಂತಿಕಾರಿಗಳನ್ನು ಖಂಡಿಸುವ ನಿರ್ಣಯ ಅದು. ಪ್ರಸ್ತಾಪಿತವಾದಂತೆಯೆ ಡಾಕ್ಟರಜಿ ಎದ್ದು ನಿಂತರು, ಒಂದೇ ಮಾತಿನಲ್ಲಿ, "ಈ ನಿರ್ಣಯಕ್ಕೆ ನನ್ನ ಪೂರಾ ವಿರೋಧವಿದೆ" ಎಂದು ಗುಡುಗಿದರು.

ಆ ಸಭೆಯಲ್ಲಿ ಎಲ್ಲರಿಗಿಂತ ಕಿರಿಯರಾಗಿದ್ದವರು ಅವರೇ. ಆದರೆ ಅವರ ಧ್ವನಿ, ಪ್ರತಿಕ್ರಿಯೆಯ ಶೈಲಿ ಇವನ್ನು ಕಂಡು, ಹೆಚ್ಚಿನ ಹಿರಿತಲೆಗಳು ಕ್ಷಣಕಾಲ ಸ್ತಂಭಿತವಾದವು. ಆಗ ಡಾಕ್ಟರಜಿಯವರ ಬೆಂಬಲಕ್ಕೆ ನಿಂತವರು ಲೋಕನಾಯಕ ಅಣೆಯವರು. ಡಾಕ್ಟರಜಿಯವರ ಕ್ರಾಂತಿಕಾರಿ ಮನೋಧರ್ಮ, ಈ ಹಿಂದಿನ ಅವರ ಚಟುವಟಿಕೆಗಳ ಪರಿಚಯ ಮತ್ತು ಅವರ ರಾಷ್ಟ್ರನಿಷ್ಠೆಯ ಕುರಿತು ಚೆನ್ನಾಗಿ ತಿಳಿದಿದ್ದವರು, ಅಣೆ ಅವರು. 'ವಂದೇಮಾತರಂ' ಚಳವಳಿಯಿಂದಾಗಿ ನೀಲಸಿಟಿ ಶಾಲೆಯಿಂದ ನಿಷ್ಕಾಷಿತರಾದ ಡಾಕ್ಟರಜಿ ಶಿಕ್ಷಣ ಮುಂದುವರಿಸಲು ಯವತಮಾಳಗೆ ಬಂದಾಗ ತಮ್ಮಲ್ಲಿ ಅವರು ಉಳಿದುಕೊಂಡಿದ್ದುದು. ವೈದ್ಯಕೀಯ ಶಿಕ್ಷಣಕ್ಕಾಗಿ ಅವರನ್ನು ಕಲ್ಕತ್ತಾಗೆ ಕಳುಹಿಸುವುದರಲ್ಲಿ ಹಾಗೂ ಅಲ್ಲಿ ಅವರ ವಸತಿಗಾಗಿ ವ್ಯವಸ್ಥೆ ಮಾಡುವುದರಲ್ಲಿ ನಿರ್ವಹಿಸಿದ ಆಸಕ್ತಿ ಇವೆಲ್ಲವೂ ಅವರಿಗೆ ಕೂಡಲೇ ನೆನಪಾದವು.

ಅವರು ಸಭೆಯನ್ನುದ್ದೇಶಿಸಿ ಮಾತಾಡುತ್ತಾ "ಈ ನಿರ್ಣಯವನ್ನು ಡಾ। ಹೆಡಗೆವಾರ್ ವಿರೋಧಿಸುತ್ತಿರುವುದಕ್ಕೆ ಬಲವಾದ ಕಾರಣವಿದೆ. ಅವರು ಕ್ರಾಂತಿಕಾರಿಗಳ ಖಂಡನೆ ಸಹಿಸುವವರಲ್ಲ. ಇಲ್ಲಿರುವ ನಾವು ಕ್ರಾಂತಿ ಮಾರ್ಗವನ್ನು ಒಪ್ಪದೇ ಇರಬಹುದು. ಆದರೆ ಕ್ರಾಂತಿಕಾರಿಗಳ ದೇಶಭಕ್ತಿ ಪ್ರಶ್ನಾತೀತವಾದುದು. ಮಾರ್ಗ ಯಾವುದೇ ಇರಲಿ, ಆದರೆ ಸ್ವರಾಜ್ಯ ಪ್ರಾಪ್ತಿಗಾಗಿ ಕ್ರಾಂತಿಕಾರಿಗಳು ಮಾಡುವಂತಹ ಅಪೂರ್ವ ತ್ಯಾಗ, ಬಲಿದಾನ, ಅವರ ತೇಜಸ್ವೀ ರಾಷ್ಟ್ರನಿಷ್ಠೆ ಇವುಗಳನ್ನು ಖಂಡಿಸಲು ನಮಗೆ ಅಧಿಕಾರವಿಲ್ಲ. ನಾವು ಮಾಡಬೇಕಾದುದು ಅವರ ಖಂಡನೆಯಲ್ಲ, ಆದರೆ ಅವರಿಗೆ ಆದರ ಸಹಿತ ಕೃತಜ್ಞತೆಯ ಸಲ್ಲಿಸುವಿಕೆ" ಎನ್ನುತ್ತ ಡಾಕ್ಟರಜಿಯವರ ಜತೆ ತಮ್ಮ ಸಹಮತವನ್ನು ಪ್ರಕಟಿಸಿದರು.

## ದೇಶ ವಿಭಜನೆಯ ದುರಂತ ಕಥೆ




ಪುಸ್ತಕ ಪರಿಚಯ

ಲೇಖಕರು : ಹೊ.ವೆ. ಶೇಷಾದ್ರಿ
ಪ್ರಕಾಶನ : ಸಾಹಿತ್ಯ ಸಿಂಧು ಪ್ರಕಾಶನ
ಬೆಲೆ : ರೂ. 200/–

'ದೇಶ ವಿಭಜನೆಯ ದುರಂತ ಕಥೆ' ರಾಷ್ಟ್ರೀಯ ವಿಚಾರ ಬರಹಗಳ ಇಂಗ್ಲಿಷ್ ಸಂಕಲನವನ್ನು ಲೇಖಕ ಹೊ.ವೆ. ಶೇಷಾದ್ರಿ ಅವರು ರಚಿಸಿದ್ದಾರೆ. ಲೇಖಕ ಕಾ. ಶ್ರೀ. ನಾಗರಾಜ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. 1947ರಲ್ಲಿ ದೇಶ ವಿಭಜನೆ ಅನಿವಾರ್ಯವಾಗಿತ್ತೇ? ದುಃಖಪೂರ್ಣವಾದ ಭಾರತ ವಿಭಜನೆಯು ಮುಂದಿನ ಪೀಳಿಗೆಗೆ ನೀಡುವ ಪಾಠಗಳೇನು? ಚರಿತ್ರೆಯು ಪುನರಾವರ್ತನೆಯಾಗದಂತೆ ಮಾಡುವ, ನಮ್ಮ ನಾಯಕರನ್ನು ಎಚ್ಚರಗೊಳಿಸುವ ಏನಾದರೂ ಸಂಗತಿಗಳುಂಟೇ?– ಮುಂತಾದ ಅಂಶಗಳನ್ನು ಸಮಾಧಾನವಾಗಿ ವಿವರಿಸಲಾಗಲೀ, ತರ್ಕಬದ್ಧವಾಗಿ ಉತ್ತರಿಸಲಾಗಲೀ ಇದುವರೆಗೆ ಯತ್ನಿಸಲಾಗಿಲ್ಲ ಎನ್ನಬೇಕಾಗುತ್ತದೆ. ಬಹುಕಾಲದಿಂದಲೂ ಅಪೂರ್ಣವಾಗಿ ಉಳಿದಿದ್ದ ಕೊರತೆಯೊಂದನ್ನು ಈ ಪುಸ್ತಕವು ಪೂರೈಸುತ್ತದೆ. ನಮ್ಮ ಚರಿತ್ರೆಯ ಬಗೆಗೆ ಹೊಸ ಸಂಶೋಧನೆಗಳನ್ನು ನಡೆಸಲು ಇತಿಹಾಸ ಸಂಶೋಧಕರಿಗೆ ಪ್ರೇರಣೆ ನೀಡಬಲ್ಲದು; ಸರ್ವಸಾಮಾನ್ಯ ಜನರಿಗೆ ನಮ್ಮೀ ದೇಶದ ಅಖಂಡತೆಗೆ ಇಂದು ಒದಗಿರುವ ಅಪಾಯದ ಚಾರಿತ್ರಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಈ ಕೃತಿಯು ಅವಕಾಶ ಒದಗಿಸಿಕೊಟ್ಟೀತು.

ಆನ್‌ಲೈನ್: https://www.sahityabooks.com

## ಅಖಂಡ ಭಾರತ – ಐತಿಹಾಸಿಕ ಸತ್ಯ...

*1ನೇ ಪುಟದಿಂದ...*

ಐತಿಹಾಸಿಕವಾಗಿ, ಆಧ್ಯಾತ್ಮಿಕವಾಗಿ, ನೈಸರ್ಗಿಕವಾಗಿಯೂ ಇರುವ ಅದರ ಅಖಂಡತೆಯೂ ಅಷ್ಟೇ ನಿಶ್ಚಿತವಾಗಿರಬೇಕು.

ಅಖಂಡ ಭಾರತದ ಅನಿವಾರ್ಯತೆ ಭಾರತಕ್ಕಿಂತ ಭಾರತದಿಂದ ಸಿಡಿದುಹೋದ ದೇಶಗಳ ಪರಿಸ್ಥಿತಿಯನ್ನು ಅವಲೋಕಿಸಿದಾಗ ಮನಗಾಣಬಹುದು. ಭಾರತದಿಂದ ಸಿಡಿದು ದೂರವಾದ ಗಾಂಧಾರ ಇಂದಿಗೆ ಅಫ್ಘಾನಿಸ್ತಾನವಾಗಿದೆ. ಭಾರತದ ಇನ್ನೊಂದು ಭಾಗ ಪಾಕಿಸ್ತಾನ, ಬಾಂಗ್ಲಾದೇಶಗಳಾಗಿವೆ. ಆದರೆ ಈ ಬದಲಾವಣೆಗಳ ನಂತರ ಶಾಂತಿ–ಸಮೃದ್ಧಿಗಳು ಮಾತ್ರ ಅಲ್ಲಿನ ಜನರ ಪಾಲಿಗೆ ಮರೀಚಿಕೆಯಾದವು. ಅಷ್ಟೇ ಅಲ್ಲ ಈ ದೇಶಗಳಲ್ಲಿನ ಅಸ್ಥಿರತೆ ಅರಾಜಕತೆ ಇಂದು ಜಗತ್ತಿನ ಅಸ್ತಿತ್ವಕ್ಕೇ ಅಪಾಯವೆಂದೆನಿಸಿದೆ. ಹಾಗಾದರೆ ಇದಕ್ಕಿರುವ ಪರಿಹಾರವೇನು? ವಿಶ್ವಶಾಂತಿಗೆ ಆಧಾರವೇನು?

ತಮ್ಮ ಪ್ರಾಣಶಕ್ತಿಯ ಮೂಲಸ್ರೋತದೊಡನೆ ಮತ್ತೆ ತಾದಾತ್ಮ್ಯ ಸಾಧಿಸಿ ಅದರೊಡನೆ ಏಕಾತ್ಮರಾಗಿರುವುದೇ ಅವುಗಳ ಸಮಸ್ಯೆಗೆ ಉತ್ತರ. ಅಂದರೆ, ನಮ್ಮೆಲ್ಲರನ್ನೂ ಸಮರಸಗೊಳಿಸಿ ಒಗ್ಗಟ್ಟಾಗಿಡುವ ಶಕ್ತಿಯೇ ನಿಜವಾದ ಪ್ರಾಣಶಕ್ತಿ. ಆ ಪ್ರಾಣಶಕ್ತಿಯೇ ಧರ್ಮ.

ಈ ಧರ್ಮವು ಸನಾತನವಾಗಿದೆ. ಅದಕ್ಕೆಂದೇ ಅದು ಮಾನವ ಧರ್ಮವಾಗಿದೆ. ಅದುವೇ ಜಗತ್ತಿನ ಧರ್ಮವೂ ಆಗಿದೆ. ಅದನ್ನೇ ಇಂದು ಹಿಂದೂಧರ್ಮ ಎಂದಾಗಿ ಕರೆಯುತ್ತಾರೆ. ■

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ವಿನಯ್ ಕೃಷ್ಣ ಹೆಚ್.ವಿ.

## ಸಾಲುದ್ದದ ಸುದ್ದಿಗಳು

### ವೇದ ಶಿಕ್ಷಣ ಮಂಡಳಿಯ ಐದು ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಿದೆ ಕೇಂದ್ರ

ವೇದ ಶಿಕ್ಷಣ ಮಂಡಳಿಯ ಐದು ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ನಿರ್ಧರಿಸಿದೆ. ಉಜ್ಜಯಿನಿಯ ಪ್ರಾಥಮಿಕ ಕೇಂದ್ರದ ಜೊತೆಗೆ ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತ ಶಿಕ್ಷಾ ಮಂಡಳಿಯ (MSRVSSB) ಐದು ಹೊಸ ಪ್ರಾದೇಶಿಕ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಲಿದೆ. ದೇಶದಾದ್ಯಂತ 123 ವೇದ ಪಾಠಶಾಲೆಗಳಿವೆ, ಅಲ್ಲಿ 4,600 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ ಮತ್ತು ಇವುಗಳಲ್ಲಿ 632 ಶಿಕ್ಷಕರಿದ್ದಾರೆ. 258 ಗುರು ಶಿಷ್ಯ ಪರಂಪರೆ ಘಟಕಗಳಲ್ಲಿ 2,240 ವಿದ್ಯಾರ್ಥಿಗಳು ಮತ್ತು 430 ಶಿಕ್ಷಕರಿದ್ದಾರೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.




### 2,000 ರೂ. ಮುಖಬೆಲೆಯ 88% ನೋಟುಗಳು ಹಿಂದಿರುಗಿವೆ: ಆರ್‌ಬಿಐ

2,000 ರೂಪಾಯಿ ಮುಖಬೆಲೆಯ ನೋಟುಗಳಲ್ಲಿ 88 ಪ್ರತಿಶತ ಅಂದರೆ 3.14 ಲಕ್ಷ ಕೋಟಿ ರೂಪಾಯಿಗಳ ಮೊತ್ತದ ನೋಟುಗಳು ಹಿಂದಕ್ಕೆ ಬಂದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (RBI) ಮಾಹಿತಿ ನೀಡಿದೆ. ಈ 2000 ರೂಪಾಯಿ ಮೌಲ್ಯದ ನೋಟುಗಳನ್ನು ಹಿಂಪಡೆಯಲಾಗುವುದು ಎಂದು ಆರ್‌ಬಿಐ ಮೇ ತಿಂಗಳಲ್ಲಿ ಘೋಷಿಸಿತ್ತು. ಸೆಪ್ಟೆಂಬರ್ 30 ರವರೆಗೆ ವಿನಿಮಯ ಅಥವಾ ಠೇವಣಿ ಮಾಡಲು ಅವಕಾಶವಿದೆ.

### ಹಸಿರು ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ ಕರ್ನಾಟಕ



ಹವಾಮಾನ ಬದಲಾವಣೆ ಸಂಬಂಧಿತ ವಿಪತ್ತುಗಳ ಹೆಚ್ಚಳದ ನಡುವೆ ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳು ಹಸಿರು ಶಕ್ತಿಗೆ ಪರಿವರ್ತನೆಗೊಳ್ಳುವ ಓಟದಲ್ಲಿ ಮುಂಚೂಣಿಯಲ್ಲಿವೆ. ಕಳೆದ ಹಣಕಾಸು ವರ್ಷದಲ್ಲಿ ದೇಶದಲ್ಲಿ ಉತ್ಪಾದಿಸಲಾದ ಎಲ್ಲಾ ನವೀಕರಿಸಬಹುದಾದ ಇಂಧನದಲ್ಲಿ ಈ ಮೂರು ರಾಜ್ಯಗಳು ಸುಮಾರು 35 ಪ್ರತಿಶತವನ್ನು ಹೊಂದಿವೆ. ಈ ಮೂರು ರಾಜ್ಯಗಳು ಕಳೆದ ವರ್ಷ ನವೀಕರಿಸಬಹುದಾದ ಮೂಲಗಳಿಂದ 126,269 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಿದೆ.

### ಮೊದಲ ಬಾರಿಗೆ ಭಾರತದಲ್ಲಿ ಆಯೋಜನೆಗೊಳ್ಳಲಿದೆ 'ವರ್ಲ್ಡ್ ಕಾಫಿ ಕಾನ್ಫರೆನ್ಸ್'

'ವಿಶ್ವ ಕಾಫಿ ಸಮ್ಮೇಳನ'ವನ್ನು (ಡಬ್ಲ್ಯುಸಿಸಿ) ಭಾರತ ಮೊದಲ ಬಾರಿಗೆ ಆಯೋಜಿಸಲು ಸಜ್ಜಾಗುತ್ತಿದೆ. ಬೆಂಗಳೂರಿನಲ್ಲಿ ಸೆಪ್ಟೆಂಬರ್ 25 ರಿಂದ ಸೆಪ್ಟೆಂಬರ್ 28 ರವರೆಗೆ ಐದನೇ ಆವೃತ್ತಿಯ ವಿಶ್ವ ಕಾಫಿ ಸಮ್ಮೇಳನವನ್ನು ಇಂಟರ್‌ನ್ಯಾಷನಲ್ ಕಾಫಿ ಸಂಸ್ಥೆಯು (ಐಸಿಒ) ಆಯೋಜನೆಗೊಳಿಸುತ್ತಿದೆ. ಇಂಟರ್‌ನ್ಯಾಷನಲ್ ಕಾಫಿ ಸಂಸ್ಥೆ ಕಾಫಿ ವ್ಯಾಪಾರವನ್ನು ಉತ್ತೇಜಿಸಲು ಮತ್ತು ಕಾಫಿ ಉತ್ಪಾದಿಸುವ ಮತ್ತು ಸೇವಿಸುವ ರಾಷ್ಟ್ರಗಳ ನಡುವೆ ಸಹಕಾರವನ್ನು ಉತ್ತೇಜಿಸಲು ಇದು ಸಹಕಾರಿಯಾಗಲಿದೆ.

### ವಿಶ್ವದ 2ನೇ ಅತಿ ದೊಡ್ಡ ಕೃಷಿ ರಾಸಾಯನಿಕಗಳನ್ನು ರಫ್ತು ಮಾಡುವ ದೇಶವಾದ ಭಾರತ

ಭಾರತವು ಚೀನಾವನ್ನು ಹಿಂದಿಕ್ಕಿ ವಿಶ್ವದ 2ನೇ ಅತಿ ದೊಡ್ಡ ಕೃಷಿ ರಾಸಾಯನಿಕಗಳನ್ನು ರಫ್ತು ಮಾಡುವ ದೇಶವಾಗಿದೆ. ಇತ್ತೀಚಿನ WTO ಡೇಟಾ ಪ್ರಕಾರ, ಹತ್ತು ವರ್ಷಗಳ ಹಿಂದೆ ಭಾರತವು ಆರನೇ ಸ್ಥಾನದಲ್ಲಿ ಇತ್ತು. ಇದು ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಯುನೈಟೆಡ್ ಸ್ಟೇಟ್ಸ್ ಭಾರತೀಯ ಕೃಷಿ ರಾಸಾಯನಿಕಗಳ ಪ್ರಮುಖ ಖರೀದಿದಾರನಾಗಿದ್ದು, ಬ್ರೆಜಿಲ್ ಮತ್ತು ಜಪಾನ್ ನಂತರದ ಸ್ಥಾನದಲ್ಲಿವೆ. ಇದನ್ನು ಪ್ರಪಂಚದಾದ್ಯಂತ 140ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಬಳಸಲಾಗುತ್ತದೆ.

### 2022–23 ರಲ್ಲಿ ಭಾರತದ ರಫ್ತು 776.30 ಶತಕೋಟಿ ಡಾಲರ್‌ಗಳಿಗೆ ಏರಿಕೆ



ಸರಕು ಮತ್ತು ಸೇವೆಗಳನ್ನು ಒಳಗೊಂಡಿರುವ ಭಾರತದ ರಫ್ತು ಇತ್ತೀಚಿನ ದಿನಗಳಲ್ಲಿ ಅಸಾಧಾರಣವಾಗಿ ಹೆಚ್ಚಾಗಿದೆ. ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ 2020–21ರಲ್ಲಿ ದೇಶದ ಒಟ್ಟಾರೆ ರಫ್ತು 497.7 ಶತಕೋಟಿ US ಡಾಲರ್‌ಗಳಿಂದ 676.53 ಶತಕೋಟಿ ಡಾಲರ್‌ಗಳಿಗೆ ಏರಿಕೆಯಾಗಿದ್ದು, 35.88 ಶೇಕಡಾ ಬೆಳವಣಿಗೆಯನ್ನು ದಾಖಲಿಸಿದೆ. 2022–23 ರಲ್ಲಿ 776.30 ಶತಕೋಟಿ ಡಾಲರ್‌ಗಳಿಗೆ ಏರಿಕೆಯಾಗಿದ್ದು, ಶೇಕಡಾ 14.75ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ ಎಂದರು.

# ಪ್ರೇಮಚಂದ್ ಶರ್ಮಾರ ದಾಳಿಂಬೆ ಕೃಷಿ ಪ್ರೇಮಕ್ಕೆ ಒಲಿದ 'ಪದ್ಮಶ್ರೀ' ಪ್ರಶಸ್ತಿ

ಪ್ರೇರಣಾ

ಸುಮಾರು ಎರಡು ದಶಕಗಳ ಹಿಂದೆ, ಯಾವ ಪ್ರದೇಶದ ರೈತರು ದಾಳಿಂಬೆ ಮತ್ತು ಸೇಬಿನ ಗಿಡಗಳನ್ನು ಬೆಳೆದು ಭರವಸೆಯ ಇಳುವರಿಯನ್ನು ಪಡೆಯಲು ಹೆಣಗಾಡುತ್ತಿದ್ದರೋ, ಅದೇ ಉತ್ತರಾಖಂಡದ ಹತಾಲ್ ಮತ್ತು ಅದರ ನೆರೆಹೊರೆಯ ಹಳ್ಳಿಗಳಿಗೆ ಇಂದು ಭೇಟಿ ನೀಡಿದರೆ ದಾಳಿಂಬೆ ಮತ್ತು ಸೇಬಿನ ತೋಟಗಳು ಸಾಮಾನ್ಯವೆಂಬಂತೆ ಭಾಸವಾಗುತ್ತದೆ. ಈ ಬದಲಾವಣೆಗೆ ಕಾರಣರಾದವರು ಪದ್ಮಶ್ರೀ ಪುರಸ್ಕೃತ ಕೃಷಿಕ ಪ್ರೇಮಚಂದ್ ಶರ್ಮಾ.

ಹತಾಲ್‌ನ ನಿವಾಸಿ ಪ್ರೇಮಚಂದ್ ಶರ್ಮಾ 5 ನೇ ತರಗತಿಯಲ್ಲಿ ಶಾಲೆಯನ್ನು ತೊರೆದವರು. ಬಾಲ್ಯದಲ್ಲಿ ಮೊದಲ ಬಾರಿಗೆ ದಾಳಿಂಬೆ ಗಿಡವನ್ನು ಹಾಗೂ ಹಣ್ಣಿನ ತಳಿಗಳನ್ನು ನೆರೆಮನೆಯವರು ಬೆಳೆಸಲು ಪ್ರಯೋಗ ಮಾಡಿದ್ದನ್ನು ಅವರು ನೋಡಿದ್ದರು. ಆದರೆ ಹಣ್ಣುಗಳು ಕೀಟಗಳ ಮುತ್ತಿಕೊಳ್ಳುವಿಕೆಗೆ ಒಳಗಾಗಿ ವಿವಿಧ ರೋಗಗಳಿಂದ ಸಸ್ಯವು ಸತ್ತುಹೋಗುತ್ತಿತ್ತು ಮತ್ತು ಕೀಟಗಳ ಬಾಧೆಯನ್ನು ತಡೆಯುವುದು ಅಂದು ಕಷ್ಟಕರವಾಗಿತ್ತು. ಆದರೆ ಪ್ರೇಮಚಂದ್ ಅವರಿಗೆ ತಮ್ಮ ಮನೆಯ ಮುಂದೆ ನೆರೆಮನೆಯವರು ಬೆಳೆದಿದ್ದ ದಾಳಿಂಬೆ ಮರ ಕೆರಳಿಸಿದ ಕುತೂಹಲ ಸಸ್ಯಕ್ಕೆ ಕೀಟಗಳ ಮುತ್ತಿಕೊಳ್ಳುವಿಕೆಗೆ ಪರಿಹಾರವನ್ನು ಕಂಡುಹಿಡಿಯಲು ಪ್ರೇರೇಪಿಸುತ್ತಿತ್ತು.

ಈ ಸಮಸ್ಯೆಗೆ ಕೃಷಿ ಇಲಾಖೆ ಅಧಿಕಾರಿಗಳು, ತಜ್ಞರು, ರಾಸಾಯನಿಕ ಗೊಬ್ಬರದ ವ್ಯಾಪಾರಿಗಳು ಯಾರಿಂದಲೂ ಪರಿಹಾರ ಕಂಡು ಕೊಳ್ಳಲು ಪ್ರೇಮಚಂದ್ ಅವರಿಗೆ ಸಾಧ್ಯವಾಗುವುದಿಲ್ಲ. ಮತ್ತು ಈ ಭೌಗೋಳಿಕ ಪ್ರದೇಶದಲ್ಲಿ ದಾಳಿಂಬೆ ಮತ್ತು ಸೇಬುವನ್ನು ಬೆಳೆಯಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಆದರೆ ತಮ್ಮ ಪ್ರಯತ್ನವನ್ನು ಬಿಡದ ಅವರು ದಾಳಿಂಬೆ ಸಸ್ಯವನ್ನು ಬೀಜಗಳು ಅಥವಾ ಕಸಿಯ ಮೂಲಕ ಎರಡು ವಿಧಾನಗಳಲ್ಲಿ ಬೆಳೆಸಬಹುದೆಂದು ಕಲಿತರು. ಮಹಾರಾಷ್ಟ್ರದ ಸೊಲ್ಲಾಪುರಕ್ಕೆ ಭೇಟಿ ನೀಡಿ ಅಲ್ಲಿಯ ಬೃಹತ್ ಹಣ್ಣುಗಳ ಇಳುವರಿಯಿಂದ ಪ್ರಭಾವಿತರಾದರು. ಭಗವಾ ತಳಿಯ 500 ನಾಟಿ ಸಸಿಗಳನ್ನು ತಮ್ಮ ಊರಿಗೆ ತಂದರು. ಅವು ಕೀಟಗಳಿಂದ ಕಡಿಮೆ ಮುತ್ತಿಕೊಳ್ಳುವಿಕೆಗೆ ಒಳಗಾಗುತ್ತಿತ್ತು ಹಾಗೂ ಸ್ಥಳೀಯ ಸಸಿಗಳಿಗೆ ಹೋಲಿಸಿದರೆ ಕಡಿಮೆ ನೀರಾವರಿ ಸಾಕಾಗಿತ್ತು.

ಸಸಿಗಳು ಯಶಸ್ವಿಯಾಗಿ ಹಣ್ಣುಗಳನ್ನು ನೀಡಲು ಪ್ರಾರಂಭವಾಯಿತು. ಆದರೆ ಹಣ್ಣುಗಳಲ್ಲಿ ಹೆಚ್ಚು ಬೀಜಗಳಿದ್ದವು ಮತ್ತು ಪ್ರತಿ ಹಣ್ಣು ಕನಿಷ್ಠ ಒಂದು ಕಿಲೋ ತೂಗುತ್ತಿತ್ತು. ನಿಧಾನವಾಗಿ ಸ್ಥಳೀಯ ಗ್ರಾಹಕರನ್ನು ಕಂಡುಕೊಂಡರು. ಹಣ್ಣು ಮಾರುಕಟ್ಟೆಯಲ್ಲಿದ್ದ ಹಿಮಾಚಲ ಮತ್ತು ಕುಲುಗಳಂತಹ ಇತರ ವಿಧಗಳಿಗೆ ಹೋಲಿಸಿದರೆ ಅದರ ಗುಣಮಟ್ಟ ತಾಜಾವಾಗಿತ್ತು. ಗ್ರಾಹಕರು ರುಚಿಯನ್ನು ಇಷ್ಟಪಟ್ಟು ಖರೀದಿಸಲು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಪ್ರೇಮಚಂದ್ ಅಂದಿನ ಮುಖ್ಯಮಂತ್ರಿಯಿಂದ 'ಅನರ್ವಾಲಾ' (ದಾಳಿಂಬೆ ಮನುಷ್ಯ) ಎಂದು ಕರೆಯಿಸಿಕೊಳ್ಳುವಷ್ಟು ಯಶಸ್ಸನ್ನು ಕಂಡರು.

> "ಕೃಷಿಯಲ್ಲಿ ಹೊಸ ಕ್ರಾಂತಿಯನ್ನು ತರಲು ರೈತರು ಹೊಸ ಪದ್ಧತಿಗೆ ಮುಂದಾಗಬೇಕು. ಹನಿ ನೀರಾವರಿ, ಹೈಟೆಕ್ ಕೃಷಿ ಮತ್ತು ಸಾವಯವ ವಿಧಾನಗಳನ್ನು ಅಳವಡಿಸಿದರೆ, ರೈತರು ಬದಲಾಗುತ್ತಿರುವ ಬೇಡಿಕೆಗಳು ಮತ್ತು ಮಾರುಕಟ್ಟೆಗಳನ್ನು ನಿಭಾಯಿಸಲು ಸಹಾಯವಾಗಬಹುದು. ಇಂತಹ ಪ್ರಯತ್ನಗಳು ರೈತ ಭ್ರಾತೃತ್ವವನ್ನು ಸಕ್ರಿಯವಾಗಿರಿಸಲು ಮತ್ತು ಯುವ ಪೀಳಿಗೆಗೆ ಕೃಷಿಯನ್ನು ಯಶಸ್ವಿ ಮತ್ತು ಸಂಭಾವ್ಯ ವೃತ್ತಿಯನ್ನಾಗಿ ಮಾಡಲು ಖಚಿತಪಡಿಸುತ್ತದೆ. ಸರ್ಕಾರವು ನನ್ನ ಪ್ರಯತ್ನಗಳನ್ನು ಗುರುತಿಸಿದೆ ಎಂದು ನಾನು ಖುಷಿಪಡುತ್ತೇನೆ, ಆದರೆ ನಾನು ದಾಳಿಂಬೆ ಕೃಷಿಯನ್ನು ಪ್ರಾರಂಭಿಸಿದಾಗ ನನಗೆ ಯಾವುದೇ ಬೆಂಬಲವಿರಲಿಲ್ಲ. ಅಧಿಕಾರಿಗಳು ಮತ್ತು ನಿವಾಸಿಗಳು ನನ್ನನ್ನು ನಿರುತ್ಸಾಹಗೊಳಿಸಿದರು. ವಿಶಿಷ್ಟವಾದದ್ದನ್ನು ಬೆಳೆಸಲು ಪ್ರಯತ್ನಿಸುತ್ತಿರುವ ನನ್ನನ್ನು ಕೆಲವರು ಅಪಹಾಸ್ಯ ಮತ್ತು ಲೇವಡಿ ಮಾಡಿದರು. ಆದರೆ ಅದೇ ಜನರು ಈಗ ನನ್ನ ಬೆನ್ನು ತಟ್ಟಿ, ಸ್ಫೂರ್ತಿ ಪಡೆದು ದಾಳಿಂಬೆ ಕೃಷಿಯನ್ನು ಕೈಗೆತ್ತಿಕೊಂಡಿರುವುದು ನನಗೆ ಖುಷಿ ತಂದಿದೆ.
>
> – ಪ್ರೇಮ್‌ಚಂದ್

ದಾಳಿಂಬೆ ಮರಗಳು ಸುಮಾರು 15–20 ವರ್ಷಗಳ ಜೀವಿತಾವಧಿಯನ್ನು ಹೊಂದಿವೆ ಎಂದು ಅರಿತು ಮಣ್ಣಿನ ಪೋಷಕಾಂಶಗಳನ್ನು ಪುನಃಸ್ಥಾಪಿಸಲು ವಿವಿಧ ಬೆಳೆಗಳ ಹೊಸ ಚಕ್ರವನ್ನು ಪ್ರಾರಂಭಿಸಿದ್ದರು. ಅದು ಅವರಿಗೆ ಲಾಭವನ್ನು ತಂದುಕೊಟ್ಟಿತು ಮತ್ತು ದಾಳಿಂಬೆಯ ಹೂಡಿಕೆಯ ವೆಚ್ಚವನ್ನು ಭರಿಸುತ್ತಿತ್ತು. ಅವರ ಯಶಸ್ಸನ್ನು ಗುರುತಿಸಿದ ನೆರೆಹೊರೆಯ ರೈತರು ದಾಳಿಂಬೆ ನಾಟಿಗಾಗಿ ಇವರಲ್ಲಿ ಕೇಳುತ್ತಿದ್ದರು.

2017ರಲ್ಲಿ, ಪಂಜಾಬಿನ ಭೇಟಿ ಪ್ರೇಮ್‌ಚಂದ್ ಅವರ ಕೃಷಿ ವಿಧಾನಗಳನ್ನು ಶಾಶ್ವತವಾಗಿ ಬದಲಾಯಿಸಿತು. ಅಲ್ಲಿ ಸೆಮಿನಾರ್



ಒಂದರಲ್ಲಿ ರಾಸಾಯನಿಕ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಹಾನಿಕಾರಕ ಬಳಕೆಯಿಂದ ರೈತರು ದೂರ ಸರಿಯಬೇಕೆಂದು ತಿಳಿಸಲಾಯಿತು. ವಿಷಕಾರಿ ರಾಸಾಯನಿಕಗಳಿಂದಾಗಿ ಕ್ಯಾನ್ಸರ್ ಕಾಯಿಲೆಗೆ ಕಾರಣವಾಗುತ್ತದೆ ಎನ್ನುವುದನ್ನು ಅರಿತಿದ್ದ ಪ್ರೇಮಚಂದ ತಮ್ಮ ಜಮೀನಿನಲ್ಲಿ ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡಿದ್ದರು. ಆದರೆ ಪಂಜಾಬ್‌ನಿಂದ ಹಿಂತಿರುಗಿದ ನಂತರ ಸಂಪೂರ್ಣವಾಗಿ ನಿಲ್ಲಿಸಿ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡರು. ಬೇವು, ಅಡಿಕೆ, ಕ್ಯಾರೆಟ್ ಹುಲ್ಲು, ಕಾಂಗ್ರೆಸ್ ಹುಲ್ಲು, ಗೋವಿನ ಸಗಣಿ, ಗೋಮೂತ್ರ, ಸಾವಯವ ತ್ಯಾಜ್ಯ ಮತ್ತು ಇತರ ಸಾವಯವ ಪದಾರ್ಥಗಳಿಂದ ತಯಾರಿಸಿದ ಸಾವಯವ ದ್ರವ ಗೊಬ್ಬರವನ್ನು ಆವಿಷ್ಕರಿಸಿ ಬಳಸಲು ಪ್ರಾರಂಭಿಸಿದರು. ಪ್ರೇಮ್‌ಚಂದ್ ಅವರು ತಯಾರಿಸಿದ ಸಾವಯವ ದ್ರವದ ಬಳಕೆಯು ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸಿ ಬೆಳೆದ ಕೃಷಿ ಉತ್ಪನ್ನಗಳಿಗೆ ಸಮನಾಗಿ ತರಲು ಸಹಾಯ ಮಾಡಿದೆ. ನಂತರದ ದಿನಗಳಲ್ಲಿ ಅವರು ತಯಾರಿಸಿದ ಸಾವಯವ ದ್ರವಕ್ಕೆ ಅಗತ್ಯ ಪ್ರಮಾಣೀಕರಣಗಳನ್ನು ಪಡೆಯಲು ಮತ್ತು ಅದನ್ನು ವಾಣಿಜ್ಯೀಕರಣಗೊಳಿಸಲು ಅದನ್ನು ಸರ್ಕಾರಿ ಏಜೆನ್ಸಿಗಳೊಂದಿಗೆ ನೋಂದಾಯಿಸಲು ಮುಂದಾದರು.

ತಮ್ಮ ಪ್ರಾಮಾಣಿಕ ಪ್ರಯತ್ನದಿಂದ ದಾಳಿಂಬೆ ಮತ್ತು ಸೇಬಿನ ತಳಿಗಳನ್ನು ಯಶಸ್ವಿಯಾಗಿ ಬೆಳೆದು ಅನೇಕ ರೈತರಿಗೂ ಮಾದರಿಯಾದ ಪ್ರೇಮಚಂದ್ರ ಅವರು ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಪದ್ಮಶ್ರೀ ಪ್ರಶಸ್ತಿಯಿಂದ ಸನ್ಮಾನಿತರಾಗಿದ್ದಾರೆ.

*ಮೂಲ: ದಿ ಬೆಟರ್ ಇಂಡಿಯಾ*

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th AUGUST 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-08-2023



## ಜ್ಞಾನವಾಪಿಯನ್ನು ಮಸೀದಿ ಎಂದು ಕರೆದಿರುವುದೇ ಐತಿಹಾಸಿಕ ತಪ್ಪು: ಯೋಗಿ



ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಜ್ಞಾನವಾಪಿ ಮಸೀದಿಯ ಸುತ್ತ ಸುತ್ತುತ್ತಿರುವ ವಿವಾದದ ಕುರಿತು ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ. ಜ್ಞಾನವಾಪಿ ವಿವಾದದ ಬಗ್ಗೆ ಕೇಳಿದ ಪ್ರಶ್ನೆಗೆ ಅತ್ಯಂತ ಸ್ಪಷ್ಟವಾಗಿ ಉತ್ತರ ನೀಡಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಜ್ಞಾನವಾಪಿಯನ್ನು ಮಸೀದಿ ಎಂದು ಕರೆಯುವುದು ಐತಿಹಾಸಿಕ ತಪ್ಪು ಎಂಬುದನ್ನು ಮುಸ್ಲಿಮರು ಒಪ್ಪಿಕೊಳ್ಳಬೇಕು. ಇದನ್ನು ಮಸೀದಿ ಎಂದು ಕರೆದಾಗಲೇ ವಿವಾದ ಆರಂಭವಾಗುವುದು. ಜ್ಞಾನವಾಪಿಯನ್ನು ಮಸೀದಿ ಎಂದು ಕರೆಯುವುದನ್ನು ಬಿಡಿ. ಹಾಗೇನಾದರೂ ಮಸೀದಿಯೇ ಆಗಿದ್ದಲ್ಲಿ ಅಲ್ಲಿ ತ್ರಿಶೂಲ ಯಾಕಿರುತ್ತದೆ ಅನ್ನೋದನ್ನು ಯೋಚನೆ ಮಾಡಬೇಕು. ದೇವರು ಯಾರಿಗೆಲ್ಲಾ ಕಣ್ಣು ಕೊಟ್ಟಿದ್ದಾರೂ ಅವರೆಲ್ಲರೂ ನೋಡುತ್ತಾರೆ. ಮಸೀದಿಯಲ್ಲಿ ತ್ರಿಶೂಲ ಯಾಕಿದೆ ಎನ್ನುವುದನ್ನು ಪ್ರಶ್ನೆ ಮಾಡಲಾಗುತ್ತದೆ? ನಾವೇನು ಅಲ್ಲಿ ತ್ರಿಶೂಲ ಇಟ್ಟಿದ್ದೇವೆಯೇ? ಜ್ಯೋತಿರ್ಲಿಂಗಗಳು ನಮ್ಮ ದೇವರುಗಳು. ಹಿಂದೆ ತಪ್ಪಾಗಿದೆ. ಇತಿಹಾಸದ ಹಿಂದೆ ಆಗಿರುವ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸ್ವತಃ ಮುಸ್ಲಿಂ ಸಮುದಾಯದಿಂದಲೇ ಇದರ ಪ್ರಸ್ತಾಪ ಬರಬೇಕು. ಈ ಪ್ರಕರಣದ ಇತ್ಯರ್ಥ ಮಾಡುವಲ್ಲಿ ಗಮನವಿಸಬೇಕು ಎಂದು ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

## ಜನರ ಕಣ್ಮನ ಸೆಳೆಯುತ್ತಿರುವ 'ಹಂಪಿ' ಎಐ ಫೋಟೊಗಳು



ಕರ್ನಾಟಕದ ಪ್ರಮುಖ ಧಾರ್ಮಿಕ ಮತ್ತು ಐತಿಹಾಸಿಕ ಪ್ರವಾಸಿ ತಾಣಗಳಲ್ಲಿ ಪ್ರಮುಖವಾಗಿರುವ ಹಂಪಿಯ ಗತ ವೈಭವವು ಆರ್ಟಿಫಿಷಲ್ ಇಂಟಲಿಜೆನ್ಸ್ (ಕೃತಕ ಬುದ್ಧಿಮತ್ತೆ–AI) ನಲ್ಲಿ ಮರುಕಳಿಸಿದ್ದು, ಜನರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಈ ಎಐ ಮೂಲಕ ಹಂಪಿಯ ವಿಜಯನಗರ ಸಾಮ್ರಾಜ್ಯ ಹೇಗಿತ್ತು ಎಂಬುದನ್ನು ಚಿತ್ರಿಸಲಾಗಿದೆ. ಈ ಬಗೆಗಿನ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.


ಹಂಪಿಯಲ್ಲಿ ಇತ್ತೀಚೆಗಷ್ಟೇ ಜಿ–20 ಸಭೆ ನಡೆಯಿತು. ಸಭೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳು ಎಐ ಮೂಲಕ ರಚಿಸಲಾದ ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯದ ಈ ಚಿತ್ರಗಳನ್ನು ಹಂಚಿಕೊಂಡಿದ್ದರು. ರಾಜ ಮಹಾರಾಜರ ಕಾಲದಲ್ಲಿ ಹಂಪಿಯ ಪರಂಪರೆ ಹೇಗಿತ್ತು, ವಿಜಯನಗರ ಸಾಮ್ರಾಜ್ಯ, ಅಲ್ಲಿನ ಜನರು, ಆಚಾರ, ವಿಚಾರ, ಸಂಪನ್ಮೂಲ, ದೇವಾಲಯ ವಾಸ್ತುಶಿಲ್ಪ ಹೀಗೆ ಎಲ್ಲವನ್ನೂ ಎಐ ಚಿತ್ರಗಳಲ್ಲಿ ಕಾಣಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿದ್ದಿರ ಬಹುದಾದಂತಹ ಹಳೆಯ ಮಾರುಕಟ್ಟೆ, ಜನರ ಖರೀದಿ, ಓಡಾಟ, ಕುದುರೆ, ಆನೆ ಹಾಗೂ ಇತರೆ ಪ್ರಾಣಿಗಳನ್ನು ಸುಂದರವಾಗಿ ಬಿಡಿಸಲಾಗಿದೆ. ತುಂಬಿ ಹರಿಯುತ್ತಿರುವ ನದಿ, ದೇವಾಲಯಗಳು, ರಾಜಮನೆತನದ ಚಿತ್ರ ಹಲವರ ಕಣ್ಮನ ಸೆಳೆಯುತ್ತಿದೆ ಎಂದು ಜಿ20 ಪ್ರತಿನಿಧಿಗಳಿಗೆ ಪ್ರವಾಸಿ ತಾಣಗಳ ಪರಿಚಯಿಸಿದ ಗೈಡ್ ಒಬ್ಬರು ಮಾಹಿತಿ ನೀಡಿದ್ದಾರೆ.

ವಿಜಯನಗರ ಶ್ರೀಕೃಷ್ಣದೇವರಾಯರ ಆಳ್ವಿಕೆಯಲ್ಲಿ ಮುತ್ತು–ರತ್ನಗಳನ್ನು ಸೇರಿನಲ್ಲಿ ಅಳೆಯುತ್ತಿದ್ದರು. ಹಂಪಿ ಸಂಪದ್ಭರಿತವಾಗಿತ್ತು ಎನ್ನುವುದನ್ನು ನಾವು ಇತಿಹಾಸ ಪತ್ರಗಳ ಮೂಲಕ ಓದಿ ತಿಳಿದುಕೊಳ್ಳುತ್ತಿದ್ದೆವು. ಇದೀಗ ಹಂಪಿ ಪರಂಪರೆಯನ್ನು, ವಿಜಯನಗರ ಸಾಮ್ರಾಜ್ಯವನ್ನು ಆರ್ಟಿಫಿಷಲ್ ಇಂಟಲಿಜೆನ್ಸ್ (ಕೃತಕ ಬುದ್ಧಿಮತ್ತೆ–AI) ಮೂಲಕ ಚಿತ್ರಿಸಿ ಜಗತ್ತಿಗೆ ತೋರಿಸಲಾಗಿದೆ. ಇವುಗಳು ಇದೀಗ ಹಂಪಿಗೆ ಬರುವ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಾಗಿಸುವಲ್ಲಿ ಭಾರೀ ಗಮನ ಸೆಳೆದಿವೆ.

## ಮಣಿಪುರ ಹಿಂಸಾಚಾರದಲ್ಲಿ ವಿದೇಶಿ ಕೈವಾಡ ಇರುವುದನ್ನು ತಳ್ಳಿಹಾಕಲಾಗುವುದಿಲ್ಲ: ಎಂಎಂ ನರವಾಣೆ

'ರಾಷ್ಟ್ರೀಯ ಭದ್ರತಾ ದೃಷ್ಟಿಕೋನ' ಎಂಬ ವಿಷಯದ ಕುರಿತು ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರ್‌ನಲ್ಲಿ ಮಾತನಾಡಿದ ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ ಎಂ ನರವಾಣೆ ವಿವಿಧ ದಂಗೆಕೋರ ಗುಂಪುಗಳಿಗೆ ಚೀನೀ ನೆರವು ಇರುವ ಬಗ್ಗೆ ಶಂಕೆ



ವ್ಯಕ್ತಪಡಿಸಿದ್ದಾರೆ. ಗಡಿ ರಾಜ್ಯಗಳಲ್ಲಿನ ಅಸ್ಥಿರತೆಯು ದೇಶದ ಒಟ್ಟಾರೆ ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿ. ಚೀನಾದಿಂದ ಈ ಗುಂಪುಗಳಿಗೆ ವರ್ಷಗಳಿಂದ ಸಹಾಯ ದೊರೆಯುತ್ತಿದೆ ಮತ್ತು ಈಗಲೂ ಅದು ಮುಂದುವರಿದಿದೆ. ಮಣಿಪುರ ಹಿಂಸಾಚಾರದಲ್ಲಿ ವಿದೇಶಿ ಕೈವಾಡ ಇರುವುದನ್ನು ತಳ್ಳಿಹಾಕಲಾಗುವುದಿಲ್ಲ. ಈ ಹಿಂಸಾಚಾರದಿಂದ ಪ್ರಯೋಜನ ಪಡೆಯುವವರು ಮಣಿಪುರವನ್ನು ಸಹಜ ಸ್ಥಿತಿಗೆ ಮರಳಲು ಬಯಸುವುದಿಲ್ಲ. ಏಕೆಂದರೆ ಈ ಅಸ್ಥಿರತೆ ಇರುವಾಗ ಅವರು ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ. ಹಿಂಸಾಚಾರವನ್ನು ಕೊನೆಗೊಳಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರವು ಎಲ್ಲಾ ಪ್ರಯತ್ನಗಳ ಹೊರತಾಗಿಯೂ ನಾವು ಹಿಂಸಾಚಾರವನ್ನು ನೋಡುವುದನ್ನು ಮುಂದುವರಿಸಲು ಇದು ಒಂದು ಕಾರಣವಾಗಿರಬಹುದು ಎಂದು ಹೇಳಿದ್ದಾರೆ.

## ಮಂತ್ರಾಲಯದಲ್ಲಿ ಸ್ಥಾಪನೆಯಾಗಲಿದೆ ವಿಶ್ವದ ಅತಿ ಎತ್ತರದ ರಾಮ ಪ್ರತಿಮೆ



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯಿಂದ ವರ್ಚುವಲ್ ವೇದಿಕೆ ಮೂಲಕ ವಿಶ್ವದ ಅತಿ ಎತ್ತರದ 108 ಅಡಿ ಎತ್ತರ ಭಗವಾನ್ ರಾಮನ ಪಂಚಲೋಹ ಪ್ರತಿಮೆ ಸ್ಥಾಪನೆ ಮಾಡುವ ರಾಮ ಮಂದಿರ ಯೋಜನೆಗೆ ಅಡಿಪಾಯ ಹಾಕಿದರು. ಮಂತ್ರಾಲಯವು ವಿಶ್ವದ ಅತಿ ಎತ್ತರದ 108 ಅಡಿ ಭಗವಾನ್ ರಾಮನ ಪ್ರತಿಮೆಯ ಭವ್ಯತೆಗೆ ಸಾಕ್ಷಿಯಾಗಲು ಸಿದ್ಧವಾಗಿದ್ದು, ಇದು ಮುಂದಿನ ಒಂದೆರಡು ವರ್ಷಗಳಲ್ಲಿ ಸಿದ್ಧವಾಗಲಿದೆ. 300 ಕೋಟಿ ವೆಚ್ಚದ ಈ ಮಹತ್ವದ ಯೋಜನೆಯನ್ನು ಜೈ ಶ್ರೀ ರಾಮ್ ಫೌಂಡೇಶನ್ ಕೈಗೆತ್ತಿಕೊಳ್ಳುತ್ತಿದೆ. ಗುಜರಾತ್‌ನಲ್ಲಿ ಸರ್ದಾರ್ ಪಟೇಲ್ ಅವರ ಪ್ರತಿಮೆಯ ಕೆಲಸ ಮಾಡಿದ ಖ್ಯಾತ ಶಿಲ್ಪಿ ರಾಮ್ ವಂಜಿ ಸುತಾರ್ ಅವರು ಭವ್ಯವಾದ ಭಗವಾನ್ ರಾಮನ ಪ್ರತಿಮೆಯನ್ನು ವಿನ್ಯಾಸಗೊಳಿಸುತ್ತಿದ್ದಾರೆ. ಪೂಜ್ಯ ಮಂತ್ರಾಲಯ ಶ್ರೀ ಮಠದಿಂದ ಸರಿಸುಮಾರು 1 ಕಿಮೀ ದೂರದಲ್ಲಿ 10 ಎಕರೆ ವಿಶಾಲವಾದ ಜಾಗದಲ್ಲಿ ರಾಮಮಂದಿರವು ಪ್ರತಿಮೆಯ ಮುಂದೆ ನಿರ್ಮಾಣವಾಗಲಿದೆ.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರು ಉತ್ತರ ಪ್ರದೇಶದ ವಾರಣಾಸಿಯಲ್ಲಿ ನಡೆದ International Temples Convention and Expo 2023ನಲ್ಲಿ ಪಾಲ್ಗೊಂಡರು.

## ಮಧ್ಯಪ್ರದೇಶದಲ್ಲಿ ಹಿಂದೂ ಧರ್ಮ ಸ್ವೀಕರಿಸಿದ 190 ಮಂದಿ ಮುಸ್ಲಿಮರು



ಮಧ್ಯಪ್ರದೇಶದಲ್ಲಿ, ನರ್ಮದಾ ನದಿಯ ದಡದಲ್ಲಿರುವ ನೇಮಾವರ್‌ನಲ್ಲಿ ಅಲೆಮಾರಿ ಮದರಿ ಸಮಾಜಕ್ಕೆ ಸೇರಿದ 35 ಮುಸ್ಲಿಂ ಕುಟುಂಬಗಳ ಸುಮಾರು 190 ಜನರು ಹಿಂದೂ ಧರ್ಮಕ್ಕೆ ಮರಳಿದ್ದಾರೆ. ರಾಮಸಿವ್ ದಾಸ್ ಶಾಸ್ತ್ರೀ ಮತ್ತು ಆನಂದಗಿರಿ ಮಹಾರಾಜ್ ನೇತೃತ್ವದಲ್ಲಿ ಇವರು ಹಿಂದೂ ಧರ್ಮ ಸ್ವೀಕರಿಸಿದ್ದಾರೆ. ಮೂಲತಃ ರತ್ಲಾಮ್ ಜಿಲ್ಲೆಯ ಅಂಬಾ ಗ್ರಾಮದವರಾದ ಈ ಜನರು ಸುಮಾರು ನಾಲ್ಕು ವರ್ಷಗಳ ಹಿಂದೆ ಸಂತ ಆನಂದಗಿರಿ ಮಹಾರಾಜರೊಂದಿಗೆ ಸಂಪರ್ಕಕ್ಕೆ ಬಂದ ನಂತರ ಹಿಂದೂ ಧರ್ಮಕ್ಕೆ ಮರಳುವ ಪ್ರಕ್ರಿಯೆಯು ಪ್ರಾರಂಭವಾಯಿತು. ಆಗಸ್ಟ್ 1ರಂದು ಸುಮಾರು 55 ಪುರುಷರು, 50 ಮಹಿಳೆಯರು ಮತ್ತು ಮಕ್ಕಳು ಹಿಂದೂ ಧರ್ಮವನ್ನು ಸ್ವೀಕರಿಸಿದರು. ನಾಲ್ಕು ತಲೆಮಾರು ಹಿಂದಿನ ಇವರು ಪೂರ್ವಜರು ಇಸ್ಲಾಂಗೆ ಮತಾಂತರಗೊಂಡಿದ್ದರು ಎಂದು ತಿಳಿದುಬಂದಿದೆ.

## 1976 ರಿಂದ 2023 ರವರೆಗೆ ವಿದೇಶಗಳಿಂದ 251 ಪ್ರಾಚೀನ ವಸ್ತುಗಳನ್ನು ಹಿಂಪಡೆದ ಭಾರತ

ದೇಶವು 1976 ರಿಂದ 2023 ರವರೆಗೆ ವಿದೇಶಗಳಿಂದ 251 ಪ್ರಾಚೀನ ವಸ್ತುಗಳನ್ನು ಹಿಂಪಡೆದಿದೆ. ಅದರಲ್ಲಿ 2014 ರಿಂದ ಒಟ್ಟು 238 ಪ್ರಾಚೀನ ವಸ್ತುಗಳನ್ನು ಮರಳಿ ದೇಶಕ್ಕೆ ತರಲಾಗಿದೆ ಎಂದು ಕೇಂದ್ರ ಮಾಹಿತಿ ನೀಡಿದೆ. ರಾಜ್ಯಸಭೆಯಲ್ಲಿ ಲಿಖಿತ ಉತ್ತರದಲ್ಲಿ ಈಶಾನ್ಯ ಪ್ರದೇಶದ ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಅಭಿವೃದ್ಧಿ ಸಚಿವ ಜಿ.ಕಿಶನ್ ರೆಡ್ಡಿ ಮಾಹಿತಿ ನೀಡಿ, ದೇಶದಿಂದ ಕಳ್ಳತನ ಮಾಡಿ ತೆಗೆದುಕೊಂಡು ಹೋಗಿರುವ ಭಾರತೀಯ ಮೂಲದ ಪ್ರಾಚೀನ ವಸ್ತುಗಳನ್ನು ಮರಳಿ ತರಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ವಿದೇಶದಲ್ಲಿರುವ ಯಾವುದೇ ವಸ್ತುಸಂಗ್ರಹಾಲಯದೊಂದಿಗೆ ಕಾಣೆಯಾದ ಅಥವಾ ಕದ್ದ ಪುರಾತನ ವಸ್ತುಗಳನ್ನು ಭಾರತಕ್ಕೆ ಹಿಂದಿರುಗಿಸುವ ಒಪ್ಪಂದವನ್ನು ಮಾಡಿಕೊಂಡಿಲ್ಲ ಎಂದು ಅವರು ಹೇಳಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.